**380ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಯಚೂರು**
**ಸಿ.ಸಿ.ನಂಬರು.380/2010**

**ಪಿಡೆಬ್ಲ್ಯೂ ನಂ.10**
**ಸಿಡೆಬ್ಲ್ಯೂ ನಂ.13**

| | |
|---|---|
| ಸಾಕ್ಷಿದಾರನ ಹೆಸರು | ಃಃ ವಿಜಯಲಕ್ಷ್ಮೀ |
| ತಂದೆಃ ಗಂಡನ ಹೆಸರು | ಃಃ ಶ್ರೀಪಾದ ರಾವ |
| ವಯಸ್ಸು | ಃಃ 45 ವರ್ಷ |
| ಉದ್ಯೋಗ | ಃಃ ಅಂಗನವಾಡಿ ಟೀಚರ |
| ವಿಳಾಸ | ಃಃ ರಾಯಚೂರು. |

(ಸಾಕ್ಷಿಯನ್ನು ಇಂದು ದಿನಾಂಕ: 22-06-2015 ರಂದು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.)

**ಮುಖ್ಯ ವಿಚಾರಣೆ ಅಭಿಯೋಜನೆ ಪರ ಮಾನ್ಯ ಹಿ.ಸ.ಸಾ.ಅ.ರವರಿಂದ**

1ನೇ ಆರೋಪಿ ಅಂಗನವಾಡಿ ಶಿಕ್ಷಕಿಯಾಗಿ, 2ನೇ ಆರೋಪಿ ಗೃಹಿಣಿಯಾಗಿ ಕೆಲಸ ಮಾಡುತ್ತಾರೆ. 1 ಮತ್ತು 2ನೇ ಆರೋಪಿತರು 2006ರಲ್ಲಿ ಶ್ರೀ ಗಂಗಾಧರ ಸ್ವಾಮಿ ಲಕ್ಕಿ ಪ್ಯಾಮಿಲಿ ಹೋಮ ಎನ್ನುವ ಹೆಸರಿನಲ್ಲಿ ಚೀಟಿ ವ್ಯವಹಾರ ಪ್ರಾರಂಭಿಸಿದರು. ಅದರಲ್ಲಿ 60 ಜನ ಸದಸ್ಯರು ಇದ್ದರು. ತಲಾ 5,000 ರೂ. ಪಾವತಿ ಮಾಡಿದರೆ ಪ್ರತಿ ತಿಂಗಳ ಡ್ರಾ ಮಾಡಿ 5,000 ರೂ. ಕ್ಕೆ ರೂ. 10,000-00 ಕೊಡುತ್ತೇವೆ ಎಂದು ಹೇಳಿದರು. ನಾನು ನನ್ನ ಮಗಳು ಸಭಾರ್ಗವಿ ಹಾಗೊ ಗಂಡ ಶ್ರೀಪಾದರಾವ ಹೆಸರಿನಲ್ಲಿ ಎರಡು ಚೀಟಿಗಳನ್ನು ಹಾಕಿದೆ. ಮೊದಲು 2-3 ತಿಂಗಳು ಚೀಟಿ ಹತ್ತಿದವರಿಗೆ ಹಣ ಪಾವತಿ ಮಾಡಿದರು. ಆ ಮೇಲೆ 1 ಮತ್ತು 2ನೇ ಆರೋಪಿತರು ಬರಲೇ ಇಲ್ಲ. ಅವರ ಮನೆಗೆ ಹೋಗಿ ವಿಚಾರಿಸಿದಾಗ ಅವರು ಊರಿಗೆ ಹೋಗಿದ್ದಾರೆ ಎಂದು ಗೊತ್ತಾಯಿತು. ಓರ್ವ ಸಿದ್ದಲಿಂಗಮ್ಮಾ ಎನ್ನುವವರು ಆರೋಪಿಗಳ ವಿರುದ್ದ ದೂರು ಕೊಟ್ಟರು. ಆರೋಪಿತರು ಸಿಕ್ಕರು. ಪೋಲಿಸರು ನನ್ನನ್ನು ಮಾರ್ಕೆಟಯಾರ್ಡ ಪೋಲಿಸಠಾಣೆಗೆ ಕರೆಯಿಸಿ ನನ್ನ ಚೀಟಿಯ ಸಂಖ್ಯೆಗಳನ್ನು ಪಡೆದರು. ಅವು 23 ಮತ್ತು 31 ಇದ್ದವು. ಆರೋಪಿತರು ನಮಗೆ ಮೋಸ ಮಾಡಿದರು.

ನನ್ನ ಚೀಟಿಗಳನ್ನು ತೋರಿಸಿದರೆ ಗುರುತಿಸುತ್ತೇನೆ. ಈಗ ತೋರಿಸಿದ ಎರಡು ಚೀಟಿಗಳು ನಾನು ಖರೀದಿಸಿದ್ದೆ ಇದ್ದು ಅವುಗಳು ನಿಪಿ.29 ಮತ್ತು ನಿಪಿ.30 ಎಂದು ಗುರುತಿಸಲಾಯಿತು. ನಾನು ದುಡಿದ ಸಂಪಾದಿಸಿದ ಮತ್ತು ನನ್ನ ತಂದೆ ನೀಡಿದ ಹಣವನ್ನು ನಿಪಿ.29 ಮತ್ತು 30 ರ ಸಲುವಾಗಿ ಪಾವತಿ ಮಾಡಿದೆ. ಇದುವರೆಗೆ ಆರೋಪಿತರು ನನ್ನ ಹಣವನ್ನು ಪಾವತಿ ಮಾಡಿಲ್ಲ. ಈ ದಿನ ಹಾಜರ ಇರುವ ಆರೋಪಿಗಳ ಪೈಕಿ 1 ಮತ್ತು 2ನೇ ಆರೋಪಿತರು ಹಾಜರ ಇದ್ದಾರೆ.

**ಪಾ ಟೀ ಸವಾಲುಃ1 ರಿಂದ 3ನೇ ಆರೋಪಿ ಪರ ಶ್ರೀ. ಹೆಚ ಆರ್ ವಕೀಲರಿಂದ;**

1ನೇ ಆರೋಪಿ ಬಸಮ್ಮ ಅಂಚೆ ಕಚೇರಿ ಯಲ್ಲಿ ನನ್ನ ಒಂದು ಆರ್.ಡಿ. ಖಾತೆ ಮಾಡಿಸಿದ್ದಳು ಅನ್ನುವುದು ನಿಜ. 2ನೇ ಆರೋಪಿ ಮಹೇಶ್ವರಿ ಅಗ್ರಿ ಗೋಲ್ಡ್‌ನಲ್ಲಿ ನನ್ನ ಒಂದು ಆರ್.ಡಿ. ಖಾತೆ ಮಾಡಿಸಿದ್ದಳು ಅನ್ನುವುದು ನಿಜ. ಅಂಚೆ ಕಚೇರಿಯಲ್ಲಿದ್ದ ಆರ್ ಡಿ. ಖಾತೆ ಹಣವನ್ನು ನನಗೆ ಮರಳಿ ಬಂದಿದೆ ಅಂದರೆ ಅರ್ದಮರ್ದಾ ಬಂದಿದೆ. ಅದೇ ರೀತಿ ಅಗ್ರಿ ಗೋಲ್ಡ್‌ನಲ್ಲಿದ್ದ ಆರ್ ಡಿ. ಖಾತೆ ಹಣವನ್ನು ನನಗೆ ಮರಳಿ ಬಂದಿದೆ ಅಂದರೆ ಅರ್ದಮರ್ದಾ ಬಂದಿದೆ. ನನ್ನ ಆರ್ ಡಿ ಖಾತೆಗಳ ಸಂಪೂರ್ಣ ಹಣ

ಬಂದಿಲ್ಲವೆಂದು ಅಂಚೆ ಕಚೇರಿಗೆ ದೂರು ಕೊಟ್ಟಿಲ್ಲ. ಮೌಖಿಕವಾಗಿ ವಿಚಾರಿಸಿದ್ದೇನೆ. ನಾವು ಪಾವತಿ ಮಾಡಿದ ಹಣವನ್ನು ನಮಗೆ ಕೊಟ್ಟ ಆರ ಡಿ ಖಾತೆಯಲ್ಲಿ ನಮೂದು ಆಗುತ್ತದೆ ಅಂದರೆ ನಮಗೆ ಪುಸ್ತಕವನ್ನೆ ಕೊಟ್ಟಿರಲಿಲ್ಲ.

1 ಮತ್ತು 2ನೇ ಆರೋಪಿತರು ಅಂಚೆ ಕಚೇರಿ ಮತ್ತು ಅಗ್ರಿ ಗೋಲ್ಡ್‌ಗಳಲ್ಲಿ ಆರ್ ಡಿ.ಗಳನ್ನು ಮಾತ್ರ ಮಾಡಿಸುತ್ತಿದ್ದರು ಅನ್ನುವುದು ಸುಳ್ಳು, ಅವರು ಮಾಡಿಸಿದ ಸಾಕಷ್ಟು ಆರ್ ಡಿ ಖಾತೆಗಳ ಹಣವನ್ನು ಮರು ಪಾವತಿ ಮಾಡಿದ್ದಾರೆ ಅಂದರೆ ಅರ್ದಮರ್ದಾ ಬಂದಿದೆ.

ಆರೋಪಿತರ ಲಕ್ಕಿ ಸ್ಕೀಮ್ ನೋಂದಣಿ ಆದ ಬಗ್ಗೆ ಗೊತ್ತಿಲ್ಲ. ಆ ಬಗ್ಗೆ ನಾನು ವಿಚಾರಿಸಿಲ್ಲ. ಆರೋಪಿತರ ಲಕ್ಕಿ ಸ್ಕೀಮ್‌ನಲ್ಲಿ ಯಾರು ಯಾರು ಎಷ್ಟು ಎಷ್ಟು ಹಣ ಪಾವತಿ ಮಾಡಿದ್ದಾರೆ ಅನ್ನುವುದು ಗೊತ್ತಿಲ್ಲ. ನಾನು ಆರೋಪಿತರಿಗೆ ಚೀಟಿ ಹಣ ಪಾವತಿ ಮಾಡಿದ ದಿನಾಂಕ ನೆನಪಿಲ್ಲ. ಹಣವನ್ನು 1ನೇ ಆರೋಪಿ ಮನೆಯಲ್ಲಿ ಪಾವತಿ ಮಾಡಿದ್ದೇನೆ. ಆಗ ಚೀಟಿ ಹಾಕಿದ ಜನ ಹಾಜರಿದ್ದರು. 1ನೇ ಆರೋಪಿ ಮನೆ ಸಂಖ್ಯೆ ಗೊತ್ತಿಲ್ಲ. ನಿಪಿ29 ಮತ್ತು 30ನ್ನು ಪೋಲಿಸರಿಗೆ ಕೊಟ್ಟಿದ್ದೇನೆ ಅನ್ನುವುದು ನಿಜ. ಅವುಗಳನ್ನು ನಾವೇ ತಯಾರಿಸಿದ್ದೇವೆ ಅನುನವುದು ಸುಳ್ಳು. ಅವುಗಳಲ್ಲಿ 1ನೇ ಆರೋಪಿ ಬಸಮ್ಮಳ ಸಹಿ ಇದೆ.

2ನೇ ಆರೋಪಿ ಈಗ ಬೆಂಗಳೂರಿನಲ್ಲಿ ವಾಸ ಮಾಡುತ್ತಾಳೆ ಅನ್ನುವುದು ನಿಜ. 2ನೇ ಆರೋಪಿಯ ಮದುವೆ 2006ರಲ್ಲಿ ಆಯಿತು ಅಂದರೆ ಲಕ್ಕಿ ಸ್ಕೀಮ್ ಪ್ರಾರಂಭಿಸಿದ 2-3 ತಿಂಗಳ ನಂತರ ಆಯಿತು.

1ನೇ ಆರೋಪಿ ಮತ್ತು ಸುಜಾತಾ ಎನ್ನುವ ಅಂಗನವಾಡಿ ಶಿಕ್ಷಕಿ ಸಂಬಂಧ ಚೆನ್ನಾಗಿರಲ್ಲಿ ಅನ್ನುವುದು ಸುಳ್ಳು. ನನ್ನ ಮತ್ತು 1ನೇ ಆರೋಪಿ ಸಂಬಂಧ ಚೆನ್ನಾಗಿತ್ತು. ಸುಜಾತಾ ಎನ್ನುವ ಅಂಗನವಾಡಿ ಶಿಕ್ಷಕಿ 1ನೇ ಆರೋಪಿ ವಿರುದ್ಧ ಒಂದು ಸುಳ್ಳ ದೂರು ಕೊಟ್ಟಿದ್ದಳು ಅನ್ನುವುದು ಸುಳ್ಳು. ಸುಜಾತಾ ಎನ್ನುವವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಅನ್ನುವುದು ಸುಳ್ಳು. ಆರೋಪಿಗಳೊಂದಿಗೆ ಸುಳ್ಳು ವ್ಯವಹಾರ ಮಾಡಿಲ್ಲ ಮತ್ತು ಹಣ ಪಾವತಿ ಮಾಡಿಲ್ಲ ಅನ್ನುವುದು ಸುಳ್ಳು.

**<u>ಪಾ ಟೀ ಸವಾಲುಃ 4ನೇ ಆರೋಪಿ ಪರ ಶ್ರೀ. ಎನ. ಬಿ.ಆರ್ ವಕೀಲರಿಂದ;</u>**

(ಮೇಲಿನ ಪಾಟೀ ಸವಾಲನೇ ಅನುಮೋದಿಸಿರುತ್ತಾರೆ.)

**<u>ಮರು ವಿಚಾರಣೆಃ</u>** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ ಎಂದು ಒಪ್ಪಲಾಗಿದೆ.**

**ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ರಾಯಚೂರು.**